**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಹೊಸಕೋಟೆ**

**ಓ.ಎಸ್. 195/2018**

**ಪಿ.ಡಬ್ಲ್ಯೂ.1 – ಕೆ. ನಾರಾಯಣಸ್ವಾಮಿ**

**ಪ್ರಮಾಣೀಕರಿಸಿದ ದಿನಾಂಕ: 27.03.2023**

**ಮುಖ್ಯ ವಿಚಾರಣೆ : ವಾದಿ ಪರ ವಕೀಲರಿಂದ : –**

ನಾನು ಈ ದಾವೆಯ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಅದರಲ್ಲಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದು, ಅವು ಸತ್ಯವಾಗಿವೆ ಮತ್ತು ಅದರಲ್ಲಿರುವ ರುಜು ನನ್ನದೇ ಆಗಿದೆ.

ಸಾಕ್ಷಿಯು ದಾವೆಗೆ ಸಂಬಂಧಿಸಿದಂತೆ ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನಿಶಾನೆಗೊಳಿಸಲಾಯಿತು.

ನಿ.ಪಿ.1 – ದಿ:23.06.2018ರ ಕಾನೂನು ಬದ್ಧ ನೋಟಿಸಿನ ಕಛೇರಿ ಪ್ರತಿ

ನಿ.ಪಿ.2 ಮತ್ತು ನಿ.ಪಿ.3 – ಅಂಚೆ ರಸೀದಿಗಳು (2)

ನಿ.ಪಿ.4 ಮತ್ತು ನಿ.ಪಿ.5, ನಿ.ಪಿ.4[ಎ] ಮತ್ತು ನಿ.ಪಿ.5[ಎ] – ಪ್ರತಿವಾದಿಗಳಿಗೆ ಜಾರಿಯಾಗದೆ ಹಿಂದಿರುಗಿದ ನೋಟಿಸ್‌ಗಳ ಲಕೋಟೆಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಟಿಸ್‌ಗಳು ಮತ್ತು ಲಕೋಟೆಯನ್ನು ನಿಶಾನೆಗೊಳಿಸಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಿಸಲಾಯಿತು)**

**ಓ.ಹೇ.ಕೇ.ಸ.ಇದೆ**

**2ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಹೊಸಕೋಟೆ.**